SC 34/24

A4 present.

A1 to A3 secured from JC, through VC.

A/c present.

PW-1 present and bound over.

Applicant counsel present.

Heard arguments.

A1 to A3 are further remanded to JC till 25.11.2025.

**<u>ದಂಡ ಪ್ರಕ್ರಿಯಾ ಸಂಹಿತ ಕಲಂ.457 ಅರ್ಜಿಯ ಮೇಲೆ ಆದೇಶ</u>**

ಅರ್ಜಿದಾರರು ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತ ಕಲಂ.457 ರಡಿಯಲ್ಲಿ ಅರ್ಜಿ ಸಲ್ಲಿಸಿ ದೂರುದಾರ ಪೊಲೀಸರು ಅರ್ಜಿದಾರರಿಗೆ ಸಂಬಂಧಪಟ್ಟಂತೆ ಕೆಎ 42 ಎನ್ 0012 ಮಾರುತಿ ಕಂಪನಿ ಬ್ರಿಜಾ ಕಾರು ಅಮಾನತ್ತು ಪಡಿಸಿಕೊಂಡಿದ್ದು ಬಿಡುಗಡೆ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸದರಿ ಅರ್ಜಿಗೆ ಸರ್ಕಾರಿ ಅಭಿಯೋಜಕರು ತಕರಾರು ಸಲ್ಲಿಸಿರುವುದಿಲ್ಲ.

ದೂರುದಾರರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತ ಕಲಂ.365, 302, 201 ಮತ್ತು 397 ಐಪಿಸಿ ರಡಿಯಲ್ಲಿ ಕೇಸು ದಾಖಲು ಮಾಡಿದ್ದು, ನಂತರ ಸದರಿ ಪೊಲೀಸರು ಸದರಿ ಪ್ರಕರಣದಲ್ಲಿ ತನಿಖೆ

ಮಾಡಿ ತನಿಖೆ ಪೂರ್ತಿಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರಿಗೆ ಸಂಬಂಧಪಟ್ಟ ಕಾರು ನಂ. ಕೆಎ 42 ಎನ್ 0012 ವಾಹನವನ್ನು ದಿಃ04.12.2023 ರಂದು ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿದ್ದು, ಪಿ.ಎಫ್. ನಂ.254/23 ಸದರಿ ವಾಹನ ಐಟಂ ನಂ.1 ಎಂದು ತೋರಿಸಿರುತ್ತಾರೆ.

ಸದರಿ ವಾಹನದ ಮಾಲೀಕರು ಅರ್ಜಿದಾರರು ಇರುತ್ತಾರೆ ಎಂಬುದರ ಬಗ್ಗೆ ವಾಹನದ ಮಾಲೀಕರು ಅರ್ಜಿದಾರರಿಗೆ ಜಿ.ಪಿ.ಎ. ಬರೆದುಕೊಟ್ಟಿದ್ದು, ಸದರಿ ವಾಹನದ ಮಾಲೀಕರು ಯಾಸೆನ್ ಫೋರೆಮ್ ಇಂಡಿಯಾ ಪ್ರೈ. ಲಿ. ಇದ್ದ ಬಗ್ಗೆ ಆರ್.ಸಿ. ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಆರ್.ಸಿ. ಪುಸ್ತಕದಲ್ಲಿ ಇರುವ ವಾಹನದ ನಂ. ಪಿ.ಎಫ್ ನಂ.254/23 ರಲ್ಲಿ ಐಟಂ ನಂ.1 ಎಂದು ನಮೂದಿಸಿದ ವಾಹನ ಒಂದೇ ಇರುತ್ತದೆ. ಪ್ರಕರಣದ ತನಿಖೆ ಪೂರ್ತಿಗೊಂಡಿರುವುದರಿಂದ, ಮುಂದಿನ ತನಿಖೆಗೆ ವಾಹನದ ಅವಶ್ಯಕತೆ ಇಲ್ಲದೇ ಇರುವುದರಿಂದ ಸದರಿ ವಾಹನವನ್ನು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ

ಬಿಡುಗಡೆ ಮಾಡುವುದು ಸೂಕ್ತ ಎಂದು ನ್ಯಾಯಾಲಯಕ್ಕೆ ಕಂಡು ಬಂದಿರುವುದರಿಂದ, ಈ ಕೆಳಗಿನಂತೆಃ

**ಆದೇಶ**

ಅರ್ಜಿದಾರರ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತ ಕಲಂ.457 ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಯಿತು.

ಅರ್ಜಿದಾರರು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದುಃ

1. ಅರ್ಜಿದಾರರು ಮಾನ್ಯ ನ್ಯಾಯಾಲಯಕ್ಕೆ 10,00,000/- ರೂ. ಮೌಲ್ಯದ ನಷ್ಟ ಭರ್ತಿ ಮುಚ್ಚಳಿಕೆ ಪತ್ರವನ್ನು ಬರೆದುಕೊಡತಕ್ಕದ್ದು.
2. ಅರ್ಜಿದಾರರು ಸದರಿ ವಾಹನವನ್ನು ನ್ಯಾಯಾಲಯ ಕೇಳಿದಾಗ ಹಾಜರುಪಡಿಸತಕ್ಕದ್ದು.
3. ಅರ್ಜಿದಾರರು ನಷ್ಟ ಭರ್ತಿ ಮುಚ್ಚಳಿಕೆ ಪತ್ರ ಬರೆದುಕೊಟ್ಟ ನಂತರ ಸಿಬ್ಬಂದಿ ವರ್ಗದವರು ಆರ್.ಸಿ. ಪುಸ್ತಕದ ಮೂಲ ದಾಖಲೆಯನ್ನು ಪರಿಶೀಲಿಸಿ ಸರಿ ಇದ್ದಾಗ ಸದರಿ ವಾಹನವನ್ನು ಬಿಡುಗಡೆ ಮಾಡಲು ಸಂಬಂಧಪಟ್ಟಂತಹ ಠಾಣಾ ಅಧಿಕಾರಿಯವರಿಗೆ ಮಾಹಿತಿ ನೀಡತಕ್ಕದ್ದು.
4. ಸಂಬಂಧಪಟ್ಟ ಠಾಣಾ ಅಧಿಕಾರಿಯವರು ವಾಹನವನ್ನು ಬಿಡುಗಡೆ

ಮಾಡುವಾಗ ವಾಹನಕ್ಕೆ ಸಂಬಂಧಪಟ್ಟ ಫೋಟೋಗಳನ್ನು ಪಡೆದುಕೊಳ್ಳತಕ್ಕದ್ದು ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸತಕ್ಕದ್ದು ಎಂದು ಆದೇಶಿಸಲಾಯಿತು.

For further chief examination of PW-1 by 25.11.2025.

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**